ವಿಷಯ :- ಚಿಕ್ಕಮಗಳೂರು ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕ್ಯಾಂಟೀನ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 902 (1681)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕ್ಯಾಂಟೀನನ್ನು ಯಾವಾಗ ಗುತ್ತಿಗೆ ನೀಡಲು ದರ ಪಟ್ಟಿಯನ್ನು ಕರೆಯಲಾಗಿದೆ ;

ಆ) ದರ ಪಟ್ಟಿಯನ್ನು ಕರೆದು ಯಾರಿಗೆ ಗುತ್ತಿಗೆ ನೀಡಲಾಗಿದೆ ;

ಇ) ಗುತ್ತಿಗೆಗೆ ಪಡೆದವರೇ ಕ್ಯಾಂಟೀನನ್ನು ನಡೆಸುತ್ತಿದ್ದಾರೆಯೇ ; ಇಲ್ಲವಾದರೆ ಅದಕ್ಕೆ ಕಾರಣಗಳೇನು ;

ಈ) ಗುತ್ತಿಗೆಗೆ ಪಡೆದವರಿಗೆ ಹಾಸನ ಇಲಾಖಾಧಿಕಾರಿಗಳು ಸ್ವಾಧೀನತೆ ಕೊಡಿಸರುವರೇ, ಕೊಡಿಸಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು (ವಿವರ ನೀಡುವುದು)?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :-

ಅ) ಚಿಕ್ಕಮಗಳೂರು ಬಸ್ ನಿಲ್ದಾಣದ ಉಪಹಾರ ಗೃಹವನ್ನು ನಡೆಸಲು ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ 12-4-95 ರಂದು ಹಾಸನ ವಿಭಾಗ ದಿಂದ ಟೆಂಡರ್ ಕರೆಯಲಾಗಿದೆ.

ಆ) ಟೆಂಡರ್‌ನಲ್ಲಿ ಶ್ರೀ ಸದಾಶಿವ ಹೆಗಡೆಯವರನ್ನು ಲೈಸಂಸುದಾರರಾಗಿ ಆಯ್ಕೆ ಮಾಡಲಾಗಿದೆ.

ಇ) ಇಲ್ಲ. ಟೆಂಡರ್ ಕರೆದ ನಂತರ ಹಿಂದಿನ ಪರವಾನಗಿದಾರರು ನ್ಯಾಯಾ ಲಯದಿಂದ ತಡೆಯಾಜ್ಞೆ ತಂದ ಕಾರಣ ಹಾಗೂ ಈಗ ಚಿಕ್ಕಮಗಳೂರಿನ ಮುನ್ಸೀಫ್ ನ್ಯಾಯಾಲಯದಲ್ಲಿ ಇರುವ ನಿರ್ಬಂದಾಜ್ಞೆಯ ಕಾರಣದಿಂದ, ಟೆಂಡರ್‌ನಲ್ಲಿ ಆಯ್ಕೆ ಯಾದವರಿಗೆ ಇನ್ನೂ ಉಪಹಾರ ಗೃಹ ಪರವಾನಗಿಯನ್ನು ನೀಡಲಾಗಿಲ್ಲ.

ಈ) ಚಿಕ್ಕಮಗಳೂರಿನ ಮುನ್ಸೀಫ್ ನ್ಯಾಯಾಲಯದಲ್ಲಿ ಈ ಕುರಿತು ಇರುವ ತಡೆಯಾಜ್ಞೆ ಕಾರಣದಿಂದ ಆಯ್ಕೆಯಾದವರಿಗೆ ಇನ್ನೂ ಉಪಹಾರ ಗೃಹದ ಸ್ವಾಧೀನತೆ ಕೊಡಿಸಲು ಸಾಧ್ಯವಾಗಿಲ್ಲ. ನ್ಯಾಯಾಲಯದ ನಿರ್ಬಂದದಿಂದ ಮುಕ್ತಗೊಂಡ ಕೂಡಲೇ ಹಿಂದಿನ ಪರವಾನಗಿದಾರರನ್ನು ತೆರವುಗೊಳಿಸಿ ಆಯ್ಕೆಯಾಗಿರುವವರಿಗೆ ಸ್ವಾಧೀನತೆ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ.